ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:-ಸಿ1(6)ಸಾ.ವರ್ಗಾ.ದೈ.ಶಿ(ವಿಪ)ವೃ.ಶಿ(ವಿ.ಪ)/2014-15 ದಿನಾಂಕ: 24-05-2014

## ಅಧಿಕೃತ ಜ್ಞಾಪನ

ವಿಷಯ:-2014ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಷಯ ಪರಿವೀಕ್ಷಕರು ದೈಹಿಕ ಶಿಕ್ಷಣ ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ:-1.ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿ:01.09.2007
2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:15.10.2007
3.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿ:14.11.2007
4.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2009 ದಿ:23.04.2011.
5.ಈ ಕಛೇರಿ ಏಕಕಡತ ಸಂಖ್ಯೆ:ಸಿ3(7)ಪ್ರಾ.ಶಾ.ಶಿ.ವರ್ಗಾ.01/13-14ರ ಆದೇಶದಂತೆ

-*****-

ಉಲ್ಲೇಖ-1ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಇದರ ಅನ್ವಯ ಉಲ್ಲೇಖ-2ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ನ್ನು ರೂಪಿಸಲಾಗಿದೆ. ಉಲ್ಲೇಖ-3ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇಟಿಆರ್.2007 ದಿನಾಂಕ: 14.11.2007ರಲ್ಲಿ ಎ, ಬಿ, ಸಿ, ವಲಯದ ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಲಾಗಿದೆ. ಉಲ್ಲೇಖ-4ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ನಿಯಮಗಳು 2011ನ್ನು ಹೊರಡಿಸಲಾಗಿದೆ. ತಿದ್ದುಪಡಿ ನಿಯಮಗಳಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಇವರ ವರ್ಗಾವಣೆಯನ್ನು ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯ್ದೆ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಮೇಲಿನ ಆದೇಶಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಶೇಷ ವೃಂದದ ವಿಷಯ ಪರಿವೀಕ್ಷಕರು ದೈಹಿಕ ಶಿಕ್ಷಣ ಮತ್ತು ವಿಷಯ ಪರಿವೀಕ್ಷಕರು(ವೃತ್ತಿಶಿಕ್ಷಣ) ಇವರುಗಳ ವರ್ಗಾವಣೆಗಳನ್ನು 2014ರ ಮೇ / ಜೂನ್ ತಿಂಗಳಲ್ಲಿ ನಡೆಸಬೇಕಾಗಿರುತ್ತದೆ. ವರ್ಗಾವಣೆ ಬಯಸುವವರು ಅರ್ಜಿಗಳನ್ನು On Line ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ. ವರ್ಗಾವಣೆ ಪ್ರಕ್ರಿಯೆಗೆ ವೇಳಾಪಟ್ಟಿಯನ್ನು ಕೆಳಗಿನಂತೆ ನಿಗದಿಪಡಿಸಿದೆ.

| ಕ್ರ.ಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 1 | ವರ್ಗಾವಣೆ ಬಯಸುವ ವಿಶೇಷ ವೃಂದದ ವಿಷಯ ಪರಿವೀಕ್ಷಕರು ದೈಹಿಕ ಶಿಕ್ಷಣ ಮತ್ತು ವಿಷಯ ಪರಿವೀಕ್ಷಕರುಗಳು (ವೃತ್ತಿ ಶಿಕ್ಷಣ) ಅರ್ಜಿಗಳನ್ನು ಕರೆಯಲು ಪ್ರಕಟಣೆ | 24-05-2014 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4.ಉಪನಿರ್ದೇಶಕರು [ಆಡಳಿತ]<br>5.ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 2 | ವರ್ಗಾವಣೆ ಕೋರುವ ವಿಶೇಷ ವೃಂದದ ವಿಷಯ ಪರಿವೀಕ್ಷಕರು ದೈಹಿಕ ಶಿಕ್ಷಣ ಮತ್ತು ವಿಷಯ ಪರಿವೀಕ್ಷಕರುಗಳು (ವೃತ್ತಿ ಶಿಕ್ಷಣ) ಅಂತರ್ಜಾಲದ [on line] ಮೂಲಕ ಇಲಾಖೆ ನಿಗದಿತ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | 26-05-2014 ರಿಂದ 04-06-2014 | ವಿಶೇಷ ವೃಂದದ ದೈಹಿಕ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಪರಿವೀಕ್ಷಕರುಗಳು |
| 3 | ಅರ್ಜಿ ಸಲ್ಲಿಸಿರುವ ವಿಶೇಷ ವೃಂದದ ವಿಷಯ ಪರಿವೀಕ್ಷಕರು ದೈಹಿಕ ಶಿಕ್ಷಣ ಮತ್ತು ವಿಷಯ ಪರಿವೀಕ್ಷಕರುಗಳು (ವೃತ್ತಿ ಶಿಕ್ಷಣ) ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಕಛೇರಿಗೆ ಹಾಜರಾಗಿ ಅಗತ್ಯ ದಾಖಲೆಗಳನ್ನು ನೀಡಿ ವರ್ಗಾವಣೆ ಅರ್ಜಿ ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯಲು ನಿಗಧಿಪಡಿಸಿದ ದಿನಾಂಕ: | 26-05-2014 ರಿಂದ 05-06-2014 | ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿಶೇಷ ವೃಂದದ ದೈಹಿಕ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಪರಿವೀಕ್ಷಕರುಗಳು ಅರ್ಜಿ ಸಲ್ಲಿಸಿರುವ ಎರಡು ದಿನಗಳ ಒಳಗಾಗಿ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಕಛೇರಿಗೆ ಖುದ್ದಾಗಿ ಹಾಜರಾಗುವುದು. |
| 4 | ಉಪನಿರ್ದೇಶಕರು(ಆಡಳಿತ)/ರಾಜ್ಯ ಕಛೇರಿಗಳ ಮುಖ್ಯಸ್ಥರ ಹಂತದಲ್ಲಿ ಅಂತರ್ ಜಾಲದಲ್ಲಿ [on line] ಮೂಲಕ ಅರ್ಜಿಗಳ ಪರಿಶೀಲನೆ ಮಾಹಿತಿ ದೃಢೀಕರಣ ಹಾಗೂ ಅರ್ಜಿ ಅನುಮೋದನೆಗೆ ನಿಗಧಿಪಡಿಸಿದ ದಿನಾಂಕ: | 26-05-2014 ರಿಂದ 05-06-2014 | ಜಿಲ್ಲಾ ಉಪನಿರ್ದೇಶಕರು [ಆಡಳಿತ] ರಾಜ್ಯ ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 5 | ಉಪನಿರ್ದೇಶಕರು(ಆಡಳಿತ) ರಾಜ್ಯ ಕಛೇರಿಗಳ ಮುಖ್ಯಸ್ಥರವರು ಅರ್ಜಿಗಳನ್ನು ಮತ್ತು ಆದ್ಯತೆಯ ಮೂಲ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಮುದ್ದಾಂ ಸಲ್ಲಿಸಲು ಕೊನೆಯ ದಿನಾಂಕ: | 10-06-2014 | ಜಿಲ್ಲಾ ಉಪನಿರ್ದೇಶಕರು [ಆಡಳಿತ] ರಾಜ್ಯ ಕೇಂದ್ರ ಕಛೇರಿಗಳ ಮುಖ್ಯಸ್ಥರು |